**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 4583/2021 ಸಿ.ಡಬ್ಲ್ಯೂ-10 ಪಿ.ಡಬ್ಲ್ಯೂ-6

| | | |
|---|---|---|
| ಹೆಸರು | ಃ | ಮಹಾಂತೇಶ |
| ತಂದೆಃಗಂಡ | ಃ | ಗುರುಭೀಮಾ |
| ವಯಸ್ಸು | ಃ | ೩೬ ವರ್ಷ |
| ಉದ್ಯೋಗ | : | ಪಿ ಎಸ್ ಐ ಡಿ ಐ ಜಿ ಕಚೇರಿ ಈಶಾನ್ಯ ವಲಯ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ 17.10.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ:ಸ:ಅ ಅವರಿಂದಃ**

ನಾನು ದಿಃ 04.08.2020 ರಿಂದ 19.01.2022 ರವರಗೆ ಆಳಂದ ಪೋಲಿಸ್ ಠಾಣೆ ಯಲ್ಲಿ ಪಿ ಎಸ್ ಐ ಎಂದು ಕಾರ್ಯ ನಿರ್ವಹಿಸಿದ್ದೇನೆ.

ದಿಃ 27-03-2021 ರಂದು ಚಾಸಾ 9 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು ಅದೇ ದಿನ ಆರೋಪಿ 1 ಮತ್ತು 2ರನ್ನು ದಸ್ತಗಿರಿ ಮಾಡಿ ಯೊಗ್ಯ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 31.03.2021 ರಂದು ಐ ಎಮ್ ವಿ ವರದಿಯನ್ನು ಪಡೆದುಕೊಂಡಿರುತ್ತೇನೆ ದಿಃ 08.04.2021 ರಂದು ಮಾನ್ಯ ನ್ಯಾಯಾಲಯ ಆದೇಶದಂತೆ ಜಪ್ತಿಪಡಿಸಿದ ವಾಹನದ ಸಂಖ್ಯೆ ಕೆ. ಎ -32 ಟಿ -1388 ಪಂಚೆನಾಮೆ ಮಾಡಿ ಮಾಲಿಕರಿಗೆ ಒಪ್ಪಿಸಿರುತ್ತೆನೆ. ದಿಃ 10.04.2021 ರಂದು ಪಿ ಎಮ್ ಎ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 17.04.2021 ರಂದು ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯೂ ಐ ಎಮ್ ವಿ ವರದಿಯನ್ನು ಗುರುತಿಸಿದ್ದು ಅದನ್ನು ನಿಪಿ-7 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯಾ ದಿಃ 08.04.2021 ರಂದು ಆದ ಪಂಚನಾಮೆಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-8 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-

8(ಎ) ಎಂದು ಗುರುತಿಸಲಾಯಿತು. ನಿಪಿ-6ರಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ. ಎಮ್ ಎಸ್ ಎಚ್ ವಕೀಲರಿಂದಃ</u>**

ನಾನು ಈ ಪ್ರಕರಣದ ಕಡತವನ್ನು ಪಡೆಯುವ ಸಮಯದಲ್ಲಿ ಕರೋನ ಅಲೆ ಇತ್ತು ಎಂದರೆ ಸರಿ. ಮತ್ತು ನಾನು ಚಾಸ-9ರವರ ಕಡೆಯಿಂದ ಕರೋನ ಕ್ರಮಗಳನ್ನು ಅನುಸರಿಸಿದ ಬಗ್ಗೆ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಆ ಸಮಯದಲ್ಲಿ ಕರೋನ ಅಲೆ ಇದ್ದ ಕಾರಣ ಜನರು ಮನೆಯಿಂದ ಹೊರಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ ಸಾಕ್ಷಿಯೂ ಮುಂದುವರದು ಅವಶ್ಯಕತೆಗೆ ತಕ್ಕಂತೆ ಹೊರಗೆ ಬರಲು ಅವಕಾಶ ಇತ್ತು ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಸಲ್ಲಿಸಿದ ಪಿರ್ಯಾದಿಯಲ್ಲಿ ದಿನಾಂಕವೂ 08.02.2021 ಎಂದು ಇದ್ದು ಆರೋಪಿಗೆ ಕೊಟ್ಟ ಪ್ರತಿಯಲ್ಲಿ ದಿಃ 07.02.2021 ಎಂದು ತಿದ್ದುಪಡಿ ಇರುತ್ತದೆ ಎಂದರೆ ಸಾಕ್ಷಿಯೂ ನಾವು ಸರಿಯಾದ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಘಟನೆ ಆಗಿರುತ್ತದೆ ಎಂದರೆ ಸಾಕ್ಷಿಯಾ ದೂರಿನಲ್ಲಿ ನಮೂದಿಸಿದ ದಿನಾಂಕದಂದು ಘಟನೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಚಾಸ-9ರವರು ಚಾಸ-1ರವರ ಸಂಬಂದಿಕರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ. ಆದರೆ ಅವರ ಗಂಡನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಸಾಮನ್ಯವಾಗಿ ಅಪಘಾತದಲ್ಲಿ ಸಾವಿಗೆ ಒಳಪಟ್ಟ ಪ್ರಕರಣಗಳನ್ನು ಸಿ ಪಿ ಐ ದರ್ಜೆಯ ಅಧಿಕಾರಿಗಳು ತನಿಖೆ ಮಾಡುತ್ತಾರೆ ಎಂದರೆ ಸಾಕ್ಷಿಯೂ ನಮಗೂ ಸಹ ತನಿಖೆ ಮಾಡುವ ಅಧಿಕಾರ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಕಡತವನುನ ಪಡೆದ ಸಮಯದಲ್ಲಿ ಟ್ರ್ಯಾಕ್ಟರ್ ನ್ನು ನಮ್ಮ ಠಾಣೆಯ ಸಿಬ್ಬಂದಿಯವರು ಪಿ ಎಸ್ ಐ ಮಲ್ಲಣ್ಣ ಚಾಸ-9 ರವರು ದಿಃ 08.02.2021 ರಂದು ಸಂಜೆ 07.00 ಗಂಟೆಗೆ ತೆಗೆದುಕೊಂಡು ಬಂದಿರುತ್ತಾರೆ. ವಾಹನವನುನ ಜಪ್ತಿಪಡಿಸಿದ ನಂತರವೇ ನಾವು ನ್ಯಾಯಾಲಯದ ಪರವಾನಿಗೆಯನ್ನು ಪಡೆದುಕೊಂಡು ನಂತರ ಆರ್ ಟಿ ಓ ದಿಂದ ವರದಿಯನ್ನು ಪಡೆಯುತ್ತೇವೆ. ವಾಹನವನ್ನು ನಾನು ಜಪ್ತಿ

ಪಡಿಸಿಕೊಂಡಡಿರುವುದಿಲ್ಲ. ದಿಃ 09.02.2021 ರಂದು ಐ ಎಮ್ ವಿ ವರದಿಗಾಗಿ ಅರ್ಜಿ ಸಲ್ಲಿಸಿರುತ್ತೇನೆ. ನಿಪಿ-7ರಲ್ಲಿ ದಿನಾಂಕ ತಿದ್ದುಪಡಿ ಆದ ಬಗ್ಗೆ ವಿಚಾರಣೆ ಮಾಡಿದ್ದಿರಾ ಎಂದರೆ ಅದನ್ನು ನೀಡಿದ ಅಧಿಕಾರಿಯವರನ್ನು ಕೇಳಬೇಕೆಂದು ನುಡಿಯುತ್ತಾರೆ. ನಿಪಿ-7ರಲ್ಲಿ ಠಾಣೆಯ ಚತುರಸೀವೆಯನ್ನು ನಮೂದಿಸಿಲ್ಲ ಆದಕಾರಣ ಅದನ್ನು ನಾನು ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಿಃ 30.30.2021 ರಂದು ನಾನು ತನಿಖಾಧಿಕಾರಿ ಇರಲಿಲ್ಲ ಎಂದರೆ ಸರಿಯಲ್ಲ. ವಾಹನವನ್ನು ಬಿಡುಗಡೆ ಮಾಡುವ ಸವಯದಲ್ಲಿ ನಮ್ಮ ಠಾಣೆ ಸಿಬ್ಬಂದಿ ಶಬ್ಬಿರ ಅವರು ಪಂಚನಾಮೆಯನ್ನು ಮಾಡಿರುತ್ತಾರೆ ನಾನು ಆದೇಶವನ್ನು ಪಾಲನೆ ಮಾಡಿರುತ್ತೇನೆ ಎಂದು ನುಡಿಯತ್ತಾರೆ. ನಿಪಿ-8ರಲ್ಲಿ ಸದರಿ ಶಬ್ಬಿರವರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯೂ ಪೋಟೋಗಳು ಇರುತ್ತವೆ ಎಂದು ನುಡಿಯತ್ತಾರೆ. ಪೋಟೋಗಳನ್ನು ನಮ್ಮ ಠಾಣೆಯ ಕ್ಯಾಮರಾದಿಂದ ತೆಗೆದಿರುತ್ತಾರೆ. ಸದರಿ ಪೋಟೋಗಳ ಬಗ್ಗೆ ಪ್ರಮಾಣ ಪತ್ರ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ನನ್ನ ತನಿಖೆಗೆ ಸಹಾಯ ಆಗಬೇಕು ಎಂದು ಸುಳ್ಳು ಸಾಕ್ಷಿ ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 27-03-2021 ರಂದು ಚಾಸಾ 9 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು ಅದೇ ದಿನ ಆರೋಪಿ 1 ಮತ್ತು 2ರನ್ನು ದಸ್ತಗಿರಿ ಮಾಡಿ ಯೊಗ್ಯ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ದಿಃ 31.03.2021 ರಂದು ಐ ಎಮ್ ವಿ ವರದಿಯನ್ನು ಪಡೆದುಕೊಂಡಿರುತ್ತೇನೆ ದಿಃ 08.04.2021 ರಂದು ಮಾನ್ಯ ನ್ಯಾಯಾಲಯ ಆದೇಶದಂತೆ ಜಪ್ತಿಪಡಿಸಿದ ವಾಹನದ ಸಂಖ್ಯೆ ಕೆ. ಎ -32 ಟಿ -1388 ಪಂಚೆನಾಮೆ ಮಾಡಿ ಮಾಲಿಕರಿಗೆ ಒಪ್ಪಿಸಿರುತ್ತೆನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 10.04.2021 ರಂದು ಪಿ ಎಮ್ ಎ ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ದಿಃ 17.04.2021 ರಂದು ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.